**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ</u>**

**<u>ನ್ಯಾಯಾಲಯದಲ್ಲಿ, ಜಗಳೂರು.</u>**

**<u>ಸಿ.ಸಿ.ನಂಃ 224/2021</u>**

<u>ಫಿರ್ಯಾದಿದಾರ</u>: ಹೆಚ್. ತಿಪ್ಪೇಸ್ವಾಮಿ ತಂದೆ ಲೇಟ್ ಹುಲಿಯಪ್ಪ,
ವಯಸ್ಸುಃ 32 ವರ್ಷ, ವೃತ್ತಿ: ಎಮ್. ಎಲ್. ಎಲ್.
ಎಲೆಕ್ಟ್ರಿಕಲ್ಸ್ ಇಂಡಿಯನ್ ಖಾಸಗಿ ನಿಯಮಿತ,
ಹಾಲಿ ವಾಸಃ ಬೆಂಗಳೂರು.

**:: ವಿರುದ್ಧ ::**

<u>ಆರೋಪಿ</u> : ಶ್ರೀ ಡಿ. ಮಂಜುನಾಥ್ ತಂದೆ ಲೇಟ್ ದುರುಗಪ್ಪ,
ವಯಸ್ಸು: ಸುಮಾರು 38 ವರ್ಷ, ವತ್ತಿ: ಮಾಪಕ ಓದುಗ,
(ಮೀಟರ್ ರೀಡರ್), ಉಪವಿಭಾಗ, ಬೆಸ್ಕಾಂ ಇಲಾಖೆ,
ಹರಿಹರ, ದಾವಣಗೆರೆ ಜಿಲ್ಲೆ.

**<u>ಆಪಾದನೆ</u>**

ಆರೋಪಿಯಾದ ನೀವು ಫಿರ್ಯಾದಿದಾರರಿಂದ ದಿನಾಂಕ 25/07/2020 ರಂದು ರೂ.13,00,000/- **ನಗದಾಗಿ** ಕೈಗಡ ಸಾಲವನ್ನು ಪಡೆದುಕೊಂಡಿರುತ್ತೀರಿ, ಸದರಿ ಹಣವನ್ನು 5 ತಿಂಗಳ ಒಳಗಾಗಿ ಮರುಪಾವತಿ ಮಾಡುತ್ತೇನೆಂದು ಭರವಸೆ ಕೊಟ್ಟಿರುತ್ತೀರಿ, ಸದರಿ ಸಾಲದ ತೀರುವಳಿಗಾಗಿ ಒಂದು ಚೆಕ್ ನಂ.336727 ನ್ನು ಮುಂಗಡ ದಿನಾಂಕ 29/12/2020 ಎಂದು ನಮೂದಿಸಿ ರೂ.13,00,000/- ರೂ.ಗಳಿಗೆ ಫೀರ್ಯಾದುದಾರರ ಹೆಸರಿಗೆ ನಗದೀಕರಿಸಿಕೊಳ್ಳಲು ಕೊಟ್ಟಿರುತ್ತೀರಿ. ದಿನಾಂಕ 22/02/2021 ರಂದು ಸದರಿ ಚೆಕ್ಕನ್ನು ಫಿರ್ಯಾದುದಾರರ ಖಾತೆ ಇರುವ ಭಾರತೀಯ ಸ್ಟೇಟ್ ಬ್ಯಾಂಕ್, ಜಗಳೂರು ಶಾಖೆಯಲ್ಲಿ ನಗದೀಕರಿಸಿಕೊಳ್ಳಲು ಹಾಜರುಪಡಿಸಿರುತ್ತಾರೆ.

ಆದರೆ ಸದರಿ ಚೆಕ್ ನಗದಾಗದೇ ದಿನಾಂಕ 01/03/2021 ರಂದು ["Funds insufficient"] ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂಬ ಷರಾದ ಹಿಂಬರಹದೊಂದಿಗೆ ಚಕ್ ನಗದೀಕರಣವಾಗದೇ ಹಿಂದಿರುಗಿ ಬಂದಿರುತ್ತದೆ. ಆದ್ದರಿಂದ ನೀವು ಮತ್ತೆ ಸದರಿ ಹಣವನ್ನು ಇಂದು ಕೊಡುತ್ತೇನೆ, ನಾಳೆ ಕೊಡುತ್ತೇನೆ, ಎಂದು ಸುಳ್ಳು ಹೇಳುತ್ತಾ ಬಂದಿರುತ್ತೀರಿ. ನಂತರ ಫಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕ 12/03/2021 ರಂದು ಆರ್.ಪಿ.ಎ.ಡಿ. ಪೋಸ್ಟ್ ಮೂಲಕ ನೋಟೀಸ್ ಕೊಟ್ಟು ತಿಳಿಸಿರುತ್ತಾರೆ. ಸದರಿ ನೋಟೀಸು 14/03/2021 ರಂದು ನಿಮಗೆ ಜಾರಿಯಾಗಿರುತ್ತದೆ. ಆದರೂ ಸಹ ನೀವು ಸದರಿ ಚೆಕ್ ಬಾಬ್ತು ಹಣವನ್ನು ಫಿರ್ಯಾದುದಾರರಿಗೆ ಕೊಟ್ಟಿರುವುದಿಲ್ಲ. ಆದ್ದರಿಂದ ಆರೋಪಿಯಾದ ನೀವು ಫಿರ್ಯಾದುದಾರರಿಗೆ ಮೋಸ ಮಾಡುವ ಉದ್ದೇಶದಿಂದ ಹಣವನ್ನು ತೀರುವಳಿ ಮಾಡಿರುವುದಿಲ್ಲ. ಆದ್ದರಿಂದ ಆರೋಪಿಯಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಕಲಂ 138 & 142 ನೆಗೋಷಿಯಬಲ್ ಇನ್ಸ್ಟ್ರುಮೆಂಟ್ ಕಾಯ್ದೆಯಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರೆಂದು ಆಪಾದಿಸಲಾಗಿದೆ.

Sd/

ದಿನಾಂಕ :18/05/2024. **ದಿ.ನ್ಯಾ. ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿ,**

ಸ್ಥಳ : ಜಗಳೂರು. **ಜಗಳೂರು.**